ಶಿವಪ್ಪನವರು 'ಹಾಂ!' ಎಂದು ಕಣ್ಣು ತೆರೆದರು... 'ಏನಿಲ್ಲ ಮಾರಾಯ್ತಿ' ಎಂದು ಎದ್ದು ಕೂತರು. ಮನದೊಳಗಿನ ಅಸಮಾಧಾನವನ್ನು ಮುಚ್ಚಿಟ್ಟುಕೊಳ್ಳಲು ಎಷ್ಟೇ ಯತ್ನಿಸಿದರೂ ಮುಖದ ಮೇಲೆ ಸುಳಿದಾಡುತ್ತಲೇ ಇತ್ತು... 'ಏನಿಲ್ಲ. ಶುಗರ್ ಜಾಸ್ತಿ ಆದಂಗ ಕಾಣಸ್ತದ. ಜಲ್ದಿ ಊಟಕ್ಕೆ ರೆಡಿ ಮಾಡು' ಅಂದ್ರು.

ಕಳೆದ ಐವತ್ತು ವರ್ಷಗಳಿಂದ ಶಿರಸಾವಹಿಸಿ ಪ್ರೊ. ಶಿವಪ್ಪನವರ ಆಜ್ಞೆ ಪಾಲಿಸುತ್ತಾ ಬಂದ ಸುಶೀಲಮ್ಮನವರು ಇವತ್ತೂ ಎದುರಾಡಲಿಲ್ಲ... 'ಆಯಿತ್ರಿ' ಎಂದು ಅಡುಗೆ ಮನೆಗೆ ಹೋದರು. ಶಿವಪ್ಪನವರ ಮನದ ತಳಮಳ ಜಾಸ್ತಿ ಆಯಿತು. ಈ ಬಗೆಯ ಅಪಮಾನವನ್ನು ಅವರು ಎಂದೂ ಅನುಭವಿಸಿರಲಿಲ್ಲ... 'ಯಾಕಾದರೂ ಆ ತಾಯಿಗಂಡನಿಗೆ ಕೆಣಕಿದೆನೊ' ಎಂದು ಪರಿತಪಿಸತೊಡಗಿದರು... ಬೆಳಿಗ್ಗೆ ವಾಕಿಂಗ್‌ಗೆ ಹೋದಾಗ ಅವರ ಹಳೆಯ ವಿದ್ಯಾರ್ಥಿಯೊಬ್ಬ ಸಿಕ್ಕಿದ್ದ. ಪ್ರೊ. ಶಿವಪ್ಪನವರು ಯಾವತ್ತೂ ಹಳೆಯ ವಿದ್ಯಾರ್ಥಿಗಳನ್ನು ತಾವಾಗೇ ಭೇಟಿಯಾಗಿ ಮಾತನಾಡಿಸುವ ಜಾಯಮಾನದವರಲ್ಲ. ಹಳೆಯ ವಿದ್ಯಾರ್ಥಿಗಳ್ಯಾರಾದರೂ ತಮ್ಮನ್ನು ಭೇಟಿ ಮಾಡಲು ಮನೆಗೆ ಬಂದಾಗಲೂ ಹತ್ತಿಪ್ಪತ್ತು ನಿಮಿಷ ಕಾಯಿಸಿ ಭೇಟಿ ಕೊಡುತ್ತಿದ್ದರು. ಪಾಪ ವಿದ್ಯಾರ್ಥಿಗಳನ್ನು ಬೇಕೆಂತಲೇ ಕಾಯಿಸಬೇಕೆಂಬ ಇರಾದೆ ಅವರಿಗೆ ಇರುತ್ತಿರಲಿಲ್ಲ... ಪ್ಯಾಂಟು, ಕೋಟು ಹಾಗೂ ಟೈ ಹಾಕಿಕೊಂಡು ಪ್ರೊಫೆಸರ್ ದಿರಿಸಿನಲ್ಲಿ ಕಾಣಿಸಿಕೊಳ್ಳಲು ಅವರಿಗೆ ಅಷ್ಟು ಸಮಯ ಹಿಡಿಯುತ್ತಿತ್ತು.

**ಬಸವರಾಜ ಉರ್ಫ್ ಕರಿಬಸಯ್ಯ ಪ್ರೊ. ಶಿವಪ್ಪನವರ ಕಣ್ಣಿಗೆ ಬೀಳುತ್ತಲೇ ಹಳೆಯ ಸಲುಗೆ ಮತ್ತು ಧಾಟಿಯಲ್ಲಿ 'ಏಯ್ ಕರಿಬಸಯ್ಯ... ಇಲ್ಲಿ ಬಾ' ಎಂದು ಕರೆದರು. ಕರಿಬಸಯ್ಯ ಮೊದಲಿನ ವಿಧೇಯತೆಯಿಂದ ಗುರುಗಳ ಹತ್ತಿರ ಬಂದ. ಶಿವಪ್ಪನವರ ಕೊಂಕು ಬುದ್ಧಿ ಇಣುಕು ಹಾಕಿತು... ಮುಂದಿನ ಎಲ್ಲ ಅವಾಂತರಗಳಿಗೆ ದಾರಿ ಮಾಡಿಕೊಟ್ಟಿತು.**

ಹಳ್ಳಿಯಿಂದ ಬಂದು ಎಂ.ಎ. ಪಾಸು ಮಾಡಿ, ಹೇಗೋ ಕಷ್ಟಪಟ್ಟು ಪಿಎಚ್.ಡಿ. ಮಹಾಪ್ರಬಂಧ ರಚಿಸಿ ಡಾ. ಶಿವಪ್ಪ ಎನಿಸಿಕೊಳ್ಳುವಷ್ಟರಲ್ಲೇ ಜೀವನದ ಸಾರ್ಥಕ್ಯ ಕಂಡುಕೊಂಡಿದ್ದರು. ವಿವಿಯಲ್ಲಿ ಅಧ್ಯಾಪಕ ಹುದ್ದೆ ಪಡೆದು ಅವರು ಇನ್ನಾವತ್ತು ಓದುವುದು, ಬರೆಯೋದು ಮಾಡಕೂಡದೆಂದು ಶಪಥ ಮಾಡಿದಂತಿತ್ತು. ಯಾರಾದರೂ ಅವರನ್ನು ಪ್ರೊ. ಶಿವಪ್ಪ ಅಂತ ಕರೆದರೆ ರೋಮಾಂಚನಗೊಳ್ಳುತ್ತಿದ್ದರು... ಕನ್ನಡ ಅಧ್ಯಯನ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ವೇದಿಕೆಯ ಮೇಲಿದ್ದ ಶಿವಪ್ಪನವರನ್ನು ಅತಿಥಿಗಳು ಬರೀ ಶಿವಪ್ಪ ಎಂದು ಸಂಬೋಧಿಸಿದರೆ ಕಸಿವಿಸಿಗೊಳ್ಳುತ್ತಿದ್ದರು. ಕೂಡಲೆ ಡಾ. ಶಿವಪ್ಪ ಎಂದು ಕರೆಯುವಂತೆ ಚೀಟಿ ಕಳಿಸಿಕೊಡುತ್ತಿದ್ದರು. ಪ್ರೊ. ಮತ್ತು ಡಾಕ್ಟರ್ ಎಂಬ ಎರಡು ಪದಗಳನ್ನು ಯಾರೂ ತಮ್ಮ ಹೆಸರಿನಿಂದ ಬೇರ್ಪಡಿಸಬಾರದೆಂದು ಅಪೇಕ್ಷಿಸುತ್ತಿದ್ದರು..

ಪ್ರೊ. ಶಿವಪ್ಪನವರು ಆ ಎರಡು ಪದಗಳಷ್ಟೆ ಹೆಚ್ಚು ಹಚ್ಚಿಕೊಂಡಿದ್ದು ಪ್ಯಾಂಟು, ಕೋಟು